# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.1-24
ಪಿ.ಡಬ್ಯೂಃ5
ಸಿಡಬ್ಲ್ಯೂ-6

ಸಾಕ್ಷಿದಾರರ ಹೆಸರು : ರುದ್ರ ಗೌಡ ಪಾಟೀಲ

ತಂದೆಯ ಹೆಸರು : ಶಿವನಗೌಡ ಪಾಟೀಲ

ವಯಸ್ಸು : 35 ವರ್ಷ

ಉದ್ಯೋಗ : ಗಸ್ತು ಅರಣ್ಯ ಪಾಲಕ , ಕ್ಯಾಸಲ್ ರಾಕ, ದಾಂಡೇಲಿ

ವಾಸ : ಅನಮೋಡ

ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ದಿನಾಂಕಃ 15-7-2015 ರಿಂದ 2022 ರ ತನಕ ಅಂಕೋಲಾ ಮಾಸ್ತಿ ಕಟ್ಟಾ ವಲಯದಲ್ಲಿ ಅರಣ್ಯ ರಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ2-11-2019 ರಂದು ಆ ದಿನ ನಾನು ರಾತ್ರಿ ಪಾಳಿ ಕರ್ತವ್ಯ ದಲ್ಲಿ ಇದ್ದೆ . ನಮ್ಮ ಇಲಾಖಾ ಸಿಬ್ಬಂದಿಗಳಾದ ಚಾಸಾ-5 ಮತ್ತು 7 ರವರೊಂದಿಗೆ ನಾನು ಇಲಾಖಾ ಗಸ್ತು ಜೀಪ ನಲ್ಲಿ ಗಸ್ತು ತಿರುಗುತ್ತಿರುವಾಗ ದಿಃ3-11-2019 ರಂದು ಬೆಳಗಿನ ಜಾವ 2-00 ರಿಂದ 2-30 ರ ಸಮಯದಲ್ಲಿ ಸುಂಕಸಾಳ ಪಂಚಾಯತಿ ಎದುರುಗಡೆ ಇರುವಂತಹ ರಾಷ್ಟ್ರಿಯ ಹೆದ್ದಾರಿ -63 ಯಲ್ಲಿ ಅಂಕೊಲಾ ಕಡೆ ಮುಖ ಮಾಡಿ ಕೊಂಡು ಒಂದು ಸ್ಕಾರ್ಪಿಯೋ ವಾಹನ ನಿಂತು ಕೊಂಡಿತ್ತು ಆ ಸಮಯದಲ್ಲಿ ನಮಗೆ ಸ್ವಲ್ಪ ಅನುಮಾನ ಬಂದಿತು . ಆಗ ನಾನು ಮತ್ತು ಚಾಸಾ -5 ಹಾಗೂ ಚಾಸಾ -7 ರವರು ಆ ವಾಹನ ಸ್ವಲ್ಪ ಪರಿಶೀಲನೆ ಮಾಡಿ ನೊಡಿರುತ್ತೇವೆ . ನಾವು ಆ ವಾಹನವನ್ನು ಪರಿಶೀಲನೆ ಮಾಡಿ ನೋಡಿದಾಗ ಸದ್ರಿ ಸ್ಕಾರ್ಪಿಯೊ ವಾಹನದ ಕಿಟಕಿಯ ಗ್ಲಾಸ ಒಳಗಡೆ ಟಾರ್ಚ ಹೊಡೆದು ನೋಡಿದಾಗ ಅಲ್ಲಿ ರಕ್ತ ದ ಕಲೆ ಹಾಗೂ ಕೂದಲು ಇರುವುದು ಕಂಡು ಬಂದಿರುತ್ತದೆ . ಆ ಮಾಂಸ ಸ್ಕಾರ್ಪಿಯೊ ವಾಹನದ ಹಿಂದಿನ ಸೀಟ ನ್ನು

ತೆಗೆದಿದ್ದರು ಮಧ್ಯ ಭಾಗದ ಸೀಟ ನಲ್ಲಿ ಬಿಳಿ ಬಣ್ಣದ ಸಿಮೆಂಟ ಚೀಲದಲ್ಲಿ ಮಾಂಸ ಇರುವುದು ಕಂಡು ಬಂದಿತು . ನಂತರ ಅವರು ನನ್ನನ್ನು ಅಲ್ಲಿಗೆ ಕರೆದಿರುತ್ತಾರೆ . ಆಗ ನಾನು ಪರಿಶೀಲನೆ ಮಾಡಿ ನೋಡಿದಾಗ ಸದ್ರಿ ಸ್ಕಾರ್ಪಿಯೋ ವಾಹನದ body ಮೇಲೆ ವಾಹನಗಳು ಕಾಡಿಗೆ ಹೋದಾಗ ಆಗುವಂತಹ ಸ್ಕ್ರೆಚ ಗಳು ಆಗಿರುವುದು ಕಂಡು ಬಂದಿರುತ್ತದೆ . ನಾವು ಪುನಃ detail ಅಗಿ ಪರೀಶಿಲನೆ ಮಾಡಿದಾಗ ಸ್ಕಾರ್ಪಿಯೊ ವಾಹನದ ಮುಂದಿನ ಭಾಗದಲ್ಲಿ ಹೆಡ್ ಟಾರ್ಚ ಇರುವುದು ಕಂಡು ಬಂದಿರುತ್ತದೆ . ಗಾಡಿ ಒಳಗಡೆ ರಕ್ತದ ಹನಿಗಳು ಬಿದ್ದಿರುವುದು ಕಂಡು ಬಂದಿರುತ್ತದೆ ಅಲ್ಲಲ್ಲಿ ವನ್ಯ ಪ್ರಾಣಿಗಳ ಕೂದಲು ಸಹ ಇತ್ತು . . ಆಗ ನಾನು ಅಲ್ಲಿಗೆ ಸಂಬಂಧಿಸಿದತಹ ಚಾಸಾ -1 ರವರಿಗೆ ಕರೆ ಮಾಡಿ ವಿಷಯ ತಿಳಿಸಿರುತ್ತೇನೆ . ಆ ಸಮಯದಲ್ಲಿ ಚಾಸಾ -1 ಮತ್ತು 2 ರವರು ಬಂದಿರುತ್ತಾರೆ . ನಂತರ ಚಾಸಾ -3 ಮತ್ತು 4 ರವರನ್ನು ಪಂಚರನ್ನಾಗಿ ಕರೆಸಿದ್ದು ನಂತರ ನಾವುಗಳು ಆ ಜಾಗದಲ್ಲಿ ಯಾರು ಇಲ್ಲದೆ ಇರುವ ಕಾರಣ ಹಾಗೆ ಬೆಳಿಗ್ಗೆ 6-30 ರವರೆಗೆ ಕಾಯುತ್ತಾ ಕುಳಿತೆವು. ಆ ಸಮಯದಲ್ಲಿ 1 ರಿಂದ 3 ಆರೊಪಿಗಳು ನಾವು ಕಾಯುತ್ತಿರುವ ಸ್ದಳಕ್ಕೆ ಬಂದಿರುತ್ತಾರೆ . ಅವರುಗಳು ವಾಹನನ್ನು ಹತ್ತಬೇಕು ಎಂದು ಹೋದಾಗ ನಾವೆಲ್ಲರೂ ಸೇರಿ ಅವರನ್ನು ಹಿಡಿದಿರುತ್ತೇವೆ . ನಂತರ ಸದ್ರಿ ಯವರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಅವರುಗಳು ತಮ್ಮಗಳ ಹೆಸರು ಮತ್ತು ವಿಳಾಸ ಹೇಳಿರುತ್ತಾರೆ . ಆ ಸಮಯದಲ್ಲಿ ಈ ವಾಹನ ಯಾರದ್ದು ಎಂದು ಕೇಳಿದಾಗ ಸೋಮನಾಥ ಶೇಟ (1 ನೇ ಆರೋಪಿ ) ತನ್ನದು ಎಂದು ಹೇಳಿರುತ್ತಾರೆ . ಆ ಮಾಂಸವನ್ನು ಯಾರು ಎಲ್ಲಿಂದ ತಂದು ಕೊಟ್ಟಿದ್ದು ಎಂದು ಕೇಳಿದಾಗ ನಮ್ಮಲ್ಲಿ ಕೆಲಸ ಮಾಡುತ್ತಿರುವ 4 ನೇ ಅರೋಪಿ ಅದನ್ನು ತಂದು ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಅವರನ್ನು ಯಾವ ಪ್ರಾಣಿಯ ಮಾಂಸ ಎಂದು ವಿಚಾರಿಸಿದಾಗ ಅದು ಕಾಡು ಕುರಿಯ ಮಾಂಸ ಎಂದು ಹೇಳಿರುತ್ತಾರೆ . ಸದ್ರಿ ಮಾಂಸವನ್ನು ನಾವು ಸುಂಕಸಾಳದಲ್ಲಿರುವ ನಮ್ಮ ಅಜ್ಜಿ ಮನೆಯಾದ ನಾರಾಯಣ ಮಹಾಬಲೆಶ್ವರ ಶೇಟ ರವರ ಮನೆಗೆ ತಂದು ಆ ಮಾಂಸದ ಅಡಿಗೆ ಮಾಡಿ ಊಟ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ . ಆ ನಂತರ ನಾವು ಪಂಚರ ಸಮಕ್ಷಮ ಸದ್ರಿ ವಾಹನ ಸ್ಕಾರ್ಪಿಯೋ ಕಪ್ಪು ಬ್ಣದ ವಾಹನವಾಗಿದ್ದು ಅದರ ನಂಬರ ಕೆಎ-31/ಎಮ್ 4023, 5.2 ಕೆಜಿ ಕಾಡು ಕುರಿ ಮಾಂಸ , 65 ಎಮ್ ಎಮ ನ 2 ಕಾಟ್ರೆಜ್ 10 ಚೆರಿ ಕಾರ್ಟ್ರೆಜ ಅದರಲ್ಲಿ 8 ಖಾಲಿ ಇದ್ದು 2 ಚಾಲನಾ ಸ್ದಿತಿಯಲ್ಲಿ ಇದ್ದವು

.ಚೆರಿ ತುಂಬುವ ಒಂದು ರಾಡ್ , ಹೆಡ ಟಾರ್ಚ , 2 ಕೀ ಪೆಡ್ ಮೊಬೈಲ ಅದರಲ್ಲಿ ಒಂದು ಲಾವಾ ಮತ್ತೊಂದು ನೊಕಿಯಾ ಮೊಬೈಲ ಸೆಟ್ ಆಗಿರುತ್ತದೆ . ಅದನ್ನು ಅಮಾನತು ಪಡಿಸಿಕೊಂಡೆವು . ಆ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ.ಈಗಾಗಲೆ ಗುರುತಿಸಲಾಗಿದ್ದ ನಿಪಿ-2 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿ ರುವ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ-2 (ಇ )ಎಂದು ಗುರುತಿಸಲಾಯಿತು .ಆ ಸಮಯದಲ್ಲಿ ಪೊಟೊ ತೆಗೆದು ಕೊಳ್ಳಲಾಗಿತ್ತು. ಆ ಪೊಟೊಗಳು ಈಗಾಗಲೆ ನಿಪಿ-3 ರಿಂದ 6 ಎಂದು ಗುರುತಿಸಲಾಗಿರುತ್ತದೆ . ಸಾಕ್ಷಿಗೆ ನಿಪಿ-3 ರಲ್ಲಿರುವ ಪರಿಕರ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನಿಪಿ-4 ರಲ್ಲಿರುವ ವಾಹನ ನೋಡಿ ಗುರುತಿಸಿರುತ್ತಾರೆ . ಸ್ಧದ್ರಿ ಸ್ಕಾರ್ಪಿಯೊ ವಾಹನದ ನಂ ಕೆಎ-31/ಎಮ್ 4023 ಯಾಗಿರುತ್ತದೆ . ಸ್ಧದ್ರಿ ಮಾಂಸವನ್ನು ಮಾಗೋಡ ದಿಂದ ಬೇಟೆಯಾಡಿ ತರಲಾಗಿತ್ತು ಎಂದು ನನಗೆ ನಂತರ ತಿಳಿದುಬಂದಿತು . ಸ್ಧದ್ರಿ ಮಾಂಸವನ್ನು ತಂದು ಕೊಟ್ಟವರು 4 ನೇ ಆರೋಪಿ ಗಣಪತಿ ಶೇಟ ಆಗಿರುತ್ತಾರೆ ಎಂದು ನಂತರ ಗೊತ್ತಾಯಿತು . ನ್ಯಾಯಾಲಯದ ಮುಂದೆ ಇರುವ 3 ಜನ ಅರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

3. ದಿಃ5-11-2019 ರಂದು ದಿಃ3-11-2019 ರ ಪ್ರಕರಣಕ್ಕೆ ಸಂಬಂಧಿಸಿದ ಕಾಡು ಕುರಿ ಮಾಂಸವನ್ನು ನ್ಯಾಯಾಲಯದ ಆದೇಶದಂತೆ ಪಂಚರ ಸಮ್ಮುಖದಲ್ಲಿ ಮಾಸ್ತಿಕಟ್ಟಾ ವಲಯ ಅರಣ್ಯ ಕಚೇರಿಯ ಹಿಂದುಗಡೆ ಮತ್ತೊಮ್ಮೆ ಅದನ್ನು ತೂಕ ಮಾಡಿ ನಂತರ ಕಟ್ಟಿಗೆಯನ್ನು ಕೂಡಿಸಿ ಬೆಂಕಿ ಹಾಕಿ ಸುಟ್ಟಿರುತ್ತೇವೆ . ಸಾಕ್ಷಿಗೆ ಈಗಾಗಲೆ ಗುರುತಿಸಿರುವ ನಿಪಿ-7 ನ್ನು ತೋರಿಸಲಾಗಿದ್ದು ಸಾಕ್ಷಿ ಅದಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-7 (ಬಿ) ಎಂದುಗುರುತಿಸಲಾಯಿತು . ಸ್ಧದ್ರಿ ಮಾಂಸವನ್ನು ಚಾಸಾ - 8 ಮತ್ತು 9 ,1 ,3,4 ರವರ ಸಮಕ್ಷಮ ಪಂಚನಾಮೆ ಕ್ರಮ ವನ್ನು ಸಂಜೆ 4-00 ಗಂಟೆಯಿಂದ 6-00 ಗಂಟೆಯವರೆಗೆ ಜರುಗಿಸಿ ಪಂಚನಾಮೆ ಮುಗಿಸಿದೆವು .

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎನ್ ರವರಿಂದಃ**

4. ನೀವು ಗಸ್ತಿಗೆ ಹೊಗುವಾಗ ತೂಕದ ಯಂತ್ರವನ್ನು ತೆಗೆದುಕೊಂಡು ಹೋಗುತ್ತೀರಿ ಎಂದು ದಾಖಲಾತಿ ಇರುತ್ತದೆಯಾ ಎಂದರೆ ದಾಖಲಾತಿ ಇಲ್ಲ . ಆದರೆ ಯಾವಾಗಲೂ ನಾವು ತೂಕದ ಯಂತ್ರವನ್ನು ಜೊತೆಯಲ್ಲಿ

ಇಟ್ಟು ಕೊಳ್ಳುತ್ತೇವೆ . ತೂಕದ ಯಂತ್ರದ ಸಹಾಯ ಇಲ್ಲದೆ ಅಂದಾಜಿನಲ್ಲಿ ಯಾವುದಾದರೂ ವಸ್ತುವಿನ ತೂಕ ಹೇಳಬಹುದಾ ಎಂದರೆ ನಿಖರವಾಗಿ ಹೇಳಲು ಬರುವುದಿಲ್ಲ . ಸುಂಕಸಾಳದಲ್ಲಿ  ತೂಕದ ಯಂತ್ರವನ್ನು ಹೇಗೆ ತೆಗೆದು ಕೊಂಡು ಹೋಗಿರುತ್ತೀರಿ ಎಂದರೆ ನಾವು ಸುಂಕಸಾಳದಿಂದ ನಮ್ಮ ಕಚೇರಿಗೆ ವಾಪಸ್ಸು ಬಂದು ಸದ್ರಿ ತೂಕದ ಯಂತ್ರ ತೆಗೆದು ಕೊಂಡು ಪುನಃ ಸ್ಥಳಕ್ಕೆ ಹೋಗಿರುತ್ತೇವೆ . ಆ ಸಮಯದಲ್ಲಿ ಸುಂಕಸಾಳದಿಂದ ನಮ್ಮ ಕಚೇರಿಗೆ ತೂಕದ ಯಂತ್ರ ತರಲು ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ . ಸುಂಕಸಾಳಕ್ಕೆ ಹೋಗಿ ಬರಬೇಕು ಎಂದರೆ ಕನಿಷ್ಟ ಅರ್ಧ ಗಂಟೆ ಬೇಕು ಎಂದರೆ ಸರಿ . ಸದ್ರಿ ತೂಕದ ಯಂತ್ರದ ಬಗ್ಗೆ ಪಂಚನಾಮೆಯಲ್ಲಿ ಬರೆಯಲಾಗಿರುತ್ತದಾ ಎಂದರೆ ಇಲ್ಲ. ಅದೇ ರೀತಿ ಸದ್ರಿ 5 ಕೆ.ಜಿ  .200 ಗ್ರಾಂ ಎಂದು ಯಾವ ಆಧಾರದಲ್ಲಿ ಪಂಚನಾಮೆಯಲ್ಲಿ ಬರೆಯಲಾಗಿರುತ್ತದಾ ಎಂದರೆ ಇಲ್ಲ.

5. ಮಾಂಸವನ್ನು ಸುಡುವಾಗ ಅದು 5 ಕೆ.ಜಿ 200 ಗ್ರಾ ತೂಕ ಇತ್ತು .  ಪ್ರಥಮತಃ ನಾನು ನೋಡಿದ ಸಮಯದಲ್ಲಿ ಸಹ ಅದು 5 ಕೆಜಿ 200 ಗ್ರಾಂ ತೂಕ ಇತ್ತು .ಮಾನ್ಯ ನ್ಯಾಯಾಲಯಕ್ಕೆ ಮಾಂಸ ವನ್ನು ಮತುತ ಕಾಗದ ಪತ್ರ ಯಾರು ತೆಗೆದು ಕೊಂಡು ಹೋಗಿದ್ದರು ಎಂದರೆ ನಾನು ಇದ್ದೆ . ಮಾನ್ಯ ನ್ಯಾಯಾಲಯದ ಮುಂದೆ ನೀವು ಏನು ಕೋರಿಕೆ ಸಲ್ಲಿಸಿರುತ್ತೀರಿ ಮತ್ತು ಏನು ಆದೇಶ ಪಡೆದು ಕೊಂಡಿರುತ್ತೀರಿ ಎಂದರೆ ಸದ್ರಿ ವಶ ಪಡಿಸಿಕೊಂಡಿರುವ ಮಾಂಸ ಮತ್ತು ಅರೋಪಿತರನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿರುತ್ತೇವೆ ಮತ್ತು ಅದರಂತೆ ನ್ಯಾಯಾಲಯವು ಆದೇಶ ಮಾಡಿರುತ್ತದೆ ಅದೇ ರೀತಿಯಾಗಿ ನಾವು ಆದೇಶ ಪಾಲನೆ ಮಾಡಿರುತ್ತೇವೆ . ಮಾಂಸದ ಬಗ್ಗೆ ನ್ಯಾಯಾಲಯವು  ಆದೇಶ ಮಾಡಿರುತ್ತದಾ ಎಂದರೆ  ಮಾನ್ಯ ನ್ಯಾಯಾಲಯದ ಮುಂದೆ ಮಾಂಸ ಹಾಜರಪಡಿಸಿದೆವು ಮಾನ್ಯ ನ್ಯಾಯಾಲಯವು ಅದನ್ನು ಸುಟ್ಟು ಹಾಕಿ ಎಂದು ಆದೇಶಿಸಿದ ಮೇರೆಗೆ ನಾವು ಅದನ್ನು ಸುಟ್ಟು ಹಾಕಿರುತ್ತೇವೆ .ನೀವು ಹಾಜರ ಪಡಿಸಿದ ನಿಪಿ–3 ರ ಪೊಟೊಗಳಲ್ಲಿ  ಇರುವ ಪರಿಕರಗಳಂತೆ ಉಳಿದ ಪೊಟೊ ನಿಪಿ–4 ಮತುತ 5 ರಲ್ಲಿ  ಅವೆ ಪರಿಕರಗಳು ಇರುತ್ತವೆಯಾ ಎಂದರೆ  ಇಲ್ಲ. ಉಳಿದ ಪರಿಕಗಳು  ಕಾರಿನ ಡ್ಯಾಷ ಬೊರ್ಡ ದಲ್ಲಿ ಇತ್ತು ಸದ್ರಿ ಪರಿಕರಗಳು ಕಾರಿನ ಡ್ಯಾಷ ಬೊರ್ಡಿನಲ್ಲಿ ಇತ್ತು ಎಂದು ಪಂಚನಾಮೆಯಲ್ಲಿ ಬರೆದಿರುತ್ತಿರಾ ಎಂದರೆ ಇಲ್ಲ . ಅವುಗಳನ್ನು

ಸೃಷ್ಟಿ ಮಾಡಿ ಕೊಂಡಿದ್ದಕ್ಕೆ ಅವುಗಳು ಕಾರಿನ ಡ್ಯಾಷ ಬೊರ್ಡ ನಲ್ಲಿ ಇತ್ತು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .

6. ನಿಪಿ–3 ರ ಪೋಟೊದಲ್ಲಿ ಸದ್ರಿ ಪ್ರಾಣಿಯ ಕೂದಲುಗಳು ಇರುತ್ತದೆಯಾ ಎಂದರೆ ಇಲ್ಲ ಅವುಗಳು ಕಾರಿನ ಶೀಟ ನಲ್ಲಿ ಇತ್ತು . ಸಾಕ್ಷಿಗೆ ನಿಪಿ–5 ರ ಪೋಟೊ ತೋರಿಸಲಾಗಿದ್ದು ಸದ್ರಿ ಪೋಟೊದಲ್ಲಿ ನಿಮಗೆ ಏನು ಕಾಣಿಸುತ್ತಿರುತ್ತದೆ ಎಂದರೆ ಮಾಂಸ ಕಾಣಿಸುತ್ತಿರುತ್ತದೆ . ಕೂದಲು ಕಾಣಿಸುತ್ತಿರುತ್ತದೆಯಾ ಎಂದರೆ ಇಲ್ಲ. ಸದ್ರಿ ನಿಪಿ–3 ರ ಪೋಟೊದಲ್ಲಿ ಮಾಂಸಕ್ಕೆ ಗನ್ ಶೊಟ ವನ್ನು ಹೊಡೆದಿರುವುದು ಕಾಣಿಸುತ್ತದೆಯಾ ಎಂದರೆ ಮಾಂಸ ಮಾತ್ರ ಕಾಣಿಸುತ್ತದೆ . ಗನ್ ಶಾಟ್ ಬಗ್ಗೆ ಕಾಣಿಸುವುದಿಲ್ಲ . ನಿಪಿ–3 ರಲ್ಲಿ ಕಾಣುವಂತಹ ಬುಲೆಟ ಗಳು ಚೇರಿ ಹಾಕಿ ಹೊಡೆದರೆ ಸ್ಪ್ರೆಡ್ ಆಗುತ್ತದೆ ಎಂದರೆ ಸರಿ . ಕುರಿಯ ಚರ್ಮ ಮತ್ತು ಮಾಂಸ ತುಂಬಾ ಮೃದು ವಾಗಿರುತ್ತದೆ ಎಂದರೆ ಕಾಡು ಕುರಿಯ ಚರ್ಮ ಮತ್ತು ಮಾಂಸ ಮೃದು ವಾಗಿರುತವುದಿಲ್ಲ . ಸದ್ರಿ ಬುಲೆಟ ದಿಂದ ಹೊಡೆದರೆ ಆ ಬುಲೆಟ್ ಚೆರಿ ಹಾಕಿ ಹೊಡೆದ ಮೇಲೆ ಆ ಪ್ರಾಣಿಯ ಮಾಂಸದಲ್ಲಿ ಸ್ಪ್ರೆಡ್ ಆಗಲೆ ಬೇಕು ಎಂದರೆ ಸರಿ .

7.ಕುರಿ ಮಾಂಸ ಸುಡಬೇಕಾದರೆ ಅದು 5 ಕೆಜಿ 200 ಗ್ರಾಂ ಇತ್ತು ಎಂದು ಯಾವ ಆಧಾರದಲ್ಲಿ ಹೇಳುತ್ತಿರಿ ಎಂದರೆ ಮತ್ತೊಮ್ಮೆ ಪಂಚರನ್ನು ಕರೆದು ಅವರ ಸಮಕ್ಷಮ ದಲ್ಲಿ ಪಂಚನಾಮೆ ಕ್ರಮ ಜರುಗಿಸಿರುವುದರಿಂದ ಹೇಳುತ್ತಿದ್ದೇನೆ . ನಿಪಿ–3 ರಿಂದ 6 ರ ಪೋಟೊ ಹಾಜರ ಪಡಿಸಿದಂತೆ ಸದ್ರಿ ಕುರಿಯ ಮಾಂಸವನ್ನು ಸುಡುವಾಗ ಪೋಟೊವನ್ನು ತೆಗೆದಿರುತ್ತಾರಾ ಮತ್ತು ಹಾಜರ ಪಡಿಸಿರುತ್ತಾರಾ ಎಂದರೆ ಪೋಟೊ ತೆಗೆದ್ದಿದ್ದರು ಅದನ್ನು ಹಾಜರ ಪಡಿಸಿದ್ದಾರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಆ ಮಾಂಸವನ್ನು ಸುಡುವ ಸಮಯದಲ್ಲಿ ತೆಗೆದ ಪೋಟೊದಲ್ಲಿ ನಾನು , ಪಂಚರು ಹಾಗೂ ನಮ್ಮ ಇಲಾಖಾ ಅಧಿಕಾರಿಗಳು ಇದ್ದರು . ಯಾವುದೆ ಕಾಡು ಪ್ರಾಣಿಗಳು ಸತ್ತರೆ ಆ ಕಾರ್ಯ ವ್ಯಾಪ್ತಿಗೆ ಬರುವ ಅರಣ್ಯ ಅಧಿಕಾರಿ ಗೆ ಶೊಕಾಸ ನೋಟಿಸು ಕೊಟ್ಟು ಆ ಕಾಡು ಪ್ರಾಣಿ ಸಾಯಲು ಕಾರಣ ಏನು ಎಂದು ವಿವರಣೆ ಕೇಳುತ್ತಾರೆ ಎಂದರೆ ಸರಿ . ಸದ್ರಿ ಪ್ರಾಣಿಯನ್ನು ಯಾವ ಗನ್ ದಿಂದ ಹೊಡೆದಿರುತ್ತಾರೆ ಎಂದು ನಿಮಗೆ ಮಾಹಿತಿ ಇರುತ್ತದೆಯಾ ಎಂದರೆ ಇಲ್ಲ. ಸದ್ರಿ ಟಾರ್ಚ ಯಾರದ್ದು ಮತ್ತು ಯಾರು ಅದನ್ನು ಆ ದಿನ ಅದನ್ನು ಹೊಡೆದು ನೋಡಿದರು ಎಂದರೆ ಅದು ನಮ್ಮ ಇಲಾಖೆಯ ಟಾರ್ಚ

ಆಗಿರುತ್ತದೆ ಅದನ್ನು ನಮ್ಮ ಇಲಾಖಾ ಸಿಬ್ಬಂದಿ ಹೊಡೆದು ನೋಡಿರುತ್ತಾರೆ ಅದು ಯಾರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಆ ದಿನ ಇಲಾಖಾ ಜೀಪನ್ನು ತೆಗೆದು ಕೊಂಡು ಹೊಗಿರುತ್ತೇನೆ ಎಂದು ಬರೆಯಲಾಗಿರುತ್ತದೆ . ಸದ್ರಿ ವಿಷಯ ಪಂಚನಾಮೆಯಲ್ಲಿ ಎಲ್ಲಿ ಇರುತ್ತದೆ ಎಂದು ಸಾಕ್ಷಿಗೆ ಪಂಚನಾಮೆ ಕೊಟ್ಟಾಗ ಅದನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ . ನೀವು ಈ ಎಲ್ಲಾ ಪ್ರಕರಣವನ್ನು ಸುಳ್ಳು ಸೃಷ್ಟಿ ಮಾಡಿರುವುದರಿಂದ ಅವುಗಳ ಬಗ್ಗೆ ಗೊತ್ತಿಲ್ಲ , ನೊಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

8. ಆ ದಿನ ಸ್ಥಳ ಮಹಜರವನ್ನು ಸುಂಕಸಾಳ ಗ್ರಾಮದ ಗ್ರಾಮಪಂಚಾಯತ ಕಾರ್ಯಾಲಯದ ಎದುರುಗಡೆ ಮಾಡಲಾಗಿತ್ತು . ಯಾವುದೆ ಪಂಚನಾಮೆ ಬರೆಯಬೇಕಾದರೆ ಅದಕ್ಕೆ ಒಂದು ಸಮಯ ಇರುತ್ತದೆ ಎಂದರೆ ಅದನ್ನು ಬೆಳಿಗ್ಗೆ 3-00 ಗಂಟೆಯಿಂದ 6-30 ರವರೆಗೆ ಬರೆದಿರುತ್ತೇವೆ . ಆ ರೀತಿ ನಿಪಿ-2 ರಲ್ಲಿ ನಮೂದು ಅಗಿರುತ್ತದೆಯಾ ಎಂದರೆ ಹೌದು .ಸಾಕ್ಷಿ ಯು 6-30 ರವರೆಗೆ ಎಂದು ಬರೆಯಲಾಗಿರುತ್ತದೆ ಹಾಗಾದರೆ 3-00 ಗಂಟೆಯಿಂದ ಬರೆಯಲು ಪ್ರಾರಂಭಿಸಿ 6-30 ರ ವರೆಗೆ ಬರೆಸಿ ಮುಗಿಸಲಾಗಿರುತ್ತದೆ ಎಂದು ನಮೂದು ಆಗಿರುತ್ತದೆಯಾ ಎಂದರೆ ಹೌದು . 3-00 ಗಂಟೆಯಿಂದ ಪಂಚನಾಮೆ ಯನ್ನು ಬರೆಯಲು ಪ್ರಾರಂಭಿಸಿದೆವು ಮತ್ತು 6-30 ಕ್ಕೆ ಮುಗಿಸಿದೆವು ಎಂದು ಹೇಗೆ ಹೇಳುತಿದ್ದೀರಿ ಎಂದರೆ ಅದರಲ್ಲಿ 6-30 ಎಂದು ನಮೂದು ಆಗಿರುತ್ತದೆ ಹಾಗಾಗಿ ಅದು 3-00 ಗಂಟೆಯಿಂದ ಪ್ರಾರಂಭಿಸಿದ್ದು ಎಂದು ಹೇಳುತ್ತಿದ್ದೇನೆ . ನೀವು ಆ ದಿನ ಕರ್ತವ್ಯದಲ್ಲಿ ಇದ್ದೀರಿ ಎಂದು ತೋರಿಸಲು ದಾಖಲಾತಿ ಹಾಜರ ಪಡಿಸಿದ್ದೀರಾ ಎಂದರೆ ನಾನು ಹೇಳಿಕೆ ನೀಡಿದ್ದೇನೆ .

9. ಚಾಸಾ-3 ಮತ್ತು 4 ರವರು ನನಗೆ 3 ವರ್ಷ ಗಳಿಂದ ಪರಿಚಯ ಇರುತ್ತಾರೆ . ಇವರಿಬ್ಬರನ್ನು ಪಂಚರನ್ನಾಗಿ ಯಾಕೆ ಆಯ್ಕೆ ಮಾಡಿದ್ದೀರಿ ಎಂದರೆ ಆ ಸಮಯದಲ್ಲಿ ರಾತ್ರಿ ಯಾಗಿದ್ದರಿಂದ ಪಂಚರಾಗಿ ಯಾರು ಸಿಕ್ಕಿಲ್ಲ ಆ ಕಾರಣದಿಂದ ಚಾಸಾ -3 ಮತ್ತು 4 ರನ್ನು ಕರೆಯಲಾಗಿರುತ್ತದೆ . ಈ ವಿಷಯವನ್ನು ಪಂಚನಾಮೆಯಲ್ಲಿ ಬರೆದಿರುತ್ತಿರಾ ಎಂದರೆ ಇಲ್ಲ . ಮತ್ತು ಈ ವಿಷಯವನ್ನು ನನ್ನ ಹೇಳಿಕೆಯಲ್ಲೂ ಹೇಳಿಲ್ಲ. ನನಗೆ ಸುಂಕಸಾಳ ಗ್ರಾಮದಲ್ಲಿ ಯಾರು ಪರಿಚಯ ಇಲ್ಲ. ನಿಮ್ಮನ್ನು ಹೊರತು ಪಡಿಸಿ ಚಾಸಾ -3 ಮತ್ತು 4 ರ ಪರಿಚಯ ಬೇರೆ ಯಾಗಿಗಾದರೂ ನಿಮ್ಮ ಇಲಾಖೆಯವರಿಗೆ ಇತ್ತಾ ಎಂದರೆ ಇರಬಹುದು . ನಿಪಿ-3 ರಿಂದ 6 ರ ಪೊಟೊ

ಹೊಡೆಯಲು ಯಾರು ಹೇಳಿದರು ಎಂದರೆ ಚಾಸಾ -1 ರವರು ಹೇಳಿರುತ್ತಾರೆ . ಅದು ಯಾರ ನಂಬರಿನ ಯಾವ ಮೊಬೈಲ ಎಂದು ನನಗೆ ಗೊತ್ತಿಲ್ಲ . ಆ ದಿನ ನನ್ನ ಬಳಿ ಯಲ್ಲಿ ಮೊಬೈಲ ಇತ್ತು ಆದರೆ ಬೆಳಿಗ್ಗೆ ಯಿಂದ ಸ್ವಿಚ ಆಫ ಆಗಿತ್ತು ಸದ್ರಿ ನಿಪಿ-3 ರಿಂದ 6 ಪೊಟೊ ಗಳನ್ನು ಯಾರ ಮೊಬೈಲದಿಂದ ತೆಗಯಲಾಗಿತ್ತು ಎಂದು ನನಗೆ ಗೊತ್ತಿಲ್ಲ . ಆರೋಪಿತರು ಆ ದಿನ ಸದ್ರಿ ಸ್ಕಾರ್ಪಿಯೊ ವಾಹನದ ಬಳಿ ಬಂದರು ಮತ್ತು ಕಾರಿನಲ್ಲಿ ಕುಳಿತು ಕೊಳ್ಳುವ ಪ್ರಯತ್ನ ಪಟ್ಟರು ಎಂದು ನೀವು ಹೇಳುವಂತೆ ಆ ಸಮಯದಲ್ಲಿ ಅವರುಗಳ ಪೊಟೊ ತೆಗೆಯಲು ತೊಂದರೆ ಇತ್ತಾ ಎಂದರೆ ಪೊಟೊ ಹೊಡೆಯುವ ಅವಕಾಶ ಸಿಗಲಿಲ್ಲ. ಅವರನ್ನು ಹಿಡಿದ ಮೇಲಾದರೂ ಪೊಟೊ ಹೊಡೆಯಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ . ನನ್ನ ಪ್ರಕಾರ ಸದ್ರಿ ಸ್ಕಾರ್ಪಿಯೊ ವಾಹನ ಯಾರು ಚಾಲನೆ ಮಾಡಿ ನಮ್ಮ ಕಚೇರಿಗೆ ತಂದಿರುತ್ತಾರೆ ಎಂದರೆ ನಮ್ಮ ಇಲಾಖೆಯ ಚಾಲಕನಾದ ರಾಮನಾಥ ರವರು ತಂದಿರುತ್ತಾರೆ . ಅದನ್ನು ಪಂಚನಾವೆಯಲ್ಲಿ ಬರೆಯಲಾಗಿರುವುದಿಲ್ಲ. ಅದನ್ನು ಇಲಾಖೆಯ ಕಚೇರಿಗೆ ತೆಗೆದುಕೊಂಡು ಹೋಗಲಾಯಿತು ಎಂದು ಪಂಚನಾಮೆಯಲ್ಲಿ ಬರೆಯಲಾಗಿರುತ್ತದೆ . ಇವತ್ತಿನವರೆಗೂ ಸದ್ರಿ ಕಾಡು ಪ್ರಾಣಿಯು ಯಾವ ಅರಣ್ಯನದ್ದು ಯಾವ range ನದ್ದು ಎಂದು ಇವತ್ತಿನ ವರೆಗೆ ತಿಳಿದ ಕೊಳ್ಳುವ ಪ್ರಯತ್ನ ಮಾಡಿರುತ್ತಿರಾ ಎಂದರೆ ಅದು ಮಾಗೋಡು ಅರಣ್ಯ ವಲಯದದ್ದು ಎಂದು ತಿಳಿದು ಬಂದಿರುತ್ತದೆ .

10. ಕುರಿ ಮಾಂಸ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕು ಕುರಿಯ ಮಾಂಸ ಎಲ್ಲಾ ಕಡೆ ಸಿಗುತ್ತದೆ . ಮಾಂಸವನ್ನು ನೋಡಿದ ತಕ್ಷಣವೆ ಅದು ಕಾಡು ಕುರಿಯ ಮಾಂಸ ಎಂದು ತಿಳಿದುಕೊಳ್ಳುವಂತಹ ತರಬೇತಿ ಅಗಿರುತ್ತದೆಯಾ ಎಂದರೆ ಇಲ್ಲ. ಸದ್ರಿ ಮಹಜರವನ್ನು ಹಾಗಾದರೆ ನೀವು ಊಹಿಸಿ ಬರೆದಿತ್ತೀರಾ ಎಂದರೆ ಸದ್ರಿ ವಾಹನಕ್ಕೆ ಎಲೆಗಳು ತಾಗಿರುವುದರಿಂದ ಅದು ಕಾಡಿನಿಂದ ಬಂದಿದ್ದಾಗಿದ್ದು ಎಂದು ಊಹೆ ಮಾಡಿ ಹಾಗೂ ಆ ಮಾಂಸವು ಕಾಡು ಕುರಿಯ ಮಾಂಸ ಎಂದು ಊಹೆಯ ಮೇರೆಗೆ ಹೇಳಲಾಗಿರುತ್ತದೆ . ಹುಬ್ಬಳ್ಳಿಯಿಂದ ಹೊರಟರೆ ಅಂಕೋಲಾ ವರೆಗೆ ಮಧ್ಯದ ಸ್ಥಳಗಳೆಲ್ಲಾ ಕಾಡಿನ ಪ್ರದೇಶ ಎಂದರೆ ಸರಿ . ಸದ್ರಿ ಎಲೆ ಯಾವ ಜಾತಿಯ ಕಾಡಿನ ಎಲೆ ಎಂದರೆ ನಾನು ಅಷ್ಟೊಂದು ಗಮನಿಸಿ ನೋಡಿಲ್ಲ. ನಿಪಿ-4 ರ ವಾಹನದ ಪೊಟೊದಲ್ಲಿ ಕಾಡಿನ ಜಾತಿಯ ಎಲೆಗಳು ವಾಹನದ ಮೇಲೆ ಇರುವುದು ಕಾಣಿಸುತ್ತದೆಯಾ ಎಂದರೆ

ಇಲ್ಲ.ನಿಮ್ಮ ಪ್ರಕಾರ ಹುಬ್ಬಳ್ಳಿ ಯಿಂದ ಅಂಕೋಲಾ ಗೆ ಬರುವಾಗ ಕಾಡು ಜಾತಿಯ ಎಲೆಗಳು ವಾಹನದ ಮೇಲೆ ಬಿದ್ದರೆ ಅದು ಕಾಡಿಗೆ ಹೋಗಿ ಬಂದಿತು ಎಂದು ಹೇಳುತ್ತೀರಾ ಎಂದರೆ ಮೇಲಿನಿಂದ ಎಲೆ ಕಾರಿನ ಮೇಲೆ ಬೀಳುವುದಕ್ಕೂ ಮತು ಎಲೆಗಳು ಕಾಡಿನಲ್ಲಿ ಹೋದಾಗ ಸಿಕ್ಕಿ ಹಾಕಿ ಕೊಳ್ಳುವುದಕ್ಕೂ ವ್ಯತ್ಯಾಸ ಇರುತ್ತದೆ ಈ ಪ್ರಕರಣದಲ್ಲಿರುವ ವಾಹನದ ಎಡಗಡೆ ಬದಿಗೆ ಸ್ಕ್ರೆಚ್ ಆಗಿರುತ್ತದೆ .ಅದುಸಹ ನೀವು ಏನು ಮಾಹಿತಿ ಇಲ್ಲದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ನೀವು ನಿಮ್ಮ ಇಲಾಖೆಯ ಬೇಜಾಬ್ದಾರಿತನ ಮುಚ್ಚಿ ಹಾಕಲು ಈ ಪ್ರಕರಣ ಸೃಷ್ಟಿಮಾಡಿದ್ದು ಎಂದರೆ ಸರಿಯಲ್ಲ.

11. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . ಸೃಷ್ಟಿ ಮಾಡಿದ ಪ್ರಕರಣಕ್ಕೆ ಪೂರಕವಾಗಿ ನೀವು ಮತ್ತು ನಿಮ್ಮ ಇಲಾಖಾ ಸಿಬ್ಬಂದಿಗಳು ಚಾಸಾ -3 ಮತ್ತು 4 ರವನ್ನು ಈ ಪ್ರಕರಣದಲ್ಲಿ ಪೂರಕವಾಗಿ ಸೇರಿಸಿಕೊಂಡು ಸುಳ್ಳು ಪ್ರಕರಣಕ್ಕೆ ಪೂರಕವಾದ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.